## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆ.ಎಲ್.ಇ.ಕಾಲೇಜ್ ಆಫ್ ಫಾರ್ಮಸಿ, ಬೆಂಗಳೂರು-10, ಇವರ ಬಿ.ಫಾರ್ಮ್ ಪ್ರವೇಶ ಸಂಖ್ಯೆಯನ್ನು 40 ರಿಂದ 60ಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1) ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರ ಪತ್ರ ಸಂಖ್ಯೆ:770-53-037(ಫಿ):ಆರ್‌ಸಿ:94, ದಿನಾಂಕ: 5-6-99.
2) ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಪ್ರಸ್ತಾವನೆ ಸಂಖ್ಯೆ:ಎಸಿಎ:ಒಹೆಚ್-7:ಪಿ-13:2000-2001:2828, ದಿನಾಂಕ:28-11-2000.

ಪ್ರಸ್ತಾವನೆ:

ಕೆ.ಎಲ್.ಇ.ಕಾಲೇಜ್ ಆಫ್ ಫಾರ್ಮಸಿ, ಬೆಂಗಳೂರು ಇವರ ಬಿ-ಫಾರ್ಮ್ ಕೋರ್ಸಿನ ಪ್ರವೇಶ ಸಂಖ್ಯೆಯನ್ನು 40 ರಿಂದ 60ಕ್ಕೆ ಹೆಚ್ಚಿಸಲು ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರು ಮೇಲೆ ಓದಲಾದ ಕ್ರಮಾಂಕ (1) ರಲ್ಲಿನ ಪತ್ರದಲ್ಲಿ ಅನುಮೋದನೆ ನೀಡಿರುವರು.

ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ಸಹ ಸದರಿ ಕಾಲೇಜಿನ ಬಿ-ಫಾರ್ಮ್ ಪ್ರವೇಶ ಸಂಖ್ಯೆಯನ್ನು 40 ರಿಂದ 60ಕ್ಕೆ ಹೆಚ್ಚಿಸಲು ಕ್ರಮಾಂಕ(2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುವರು.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ.

ಆದೇಶ ಸಂಖ್ಯೆ: ಆಕುಕ 20 ಪಿಟಿಡಿ 2001, ಬೆಂಗಳೂರು, ದಿನಾಂಕ:24-5-2001.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕೆ.ಎಲ್.ಇ.ಕಾಲೇಜ್ ಆಫ್ ಫಾರ್ಮಸಿ, ರಾಜಾಜಿನಗರ, ಬೆಂಗಳೂರು ಇವರ ಬಿ-ಫಾರ್ಮ್ ಕೋರ್ಸಿನ ಪ್ರವೇಶ ಸಂಖ್ಯೆಯನ್ನು 2001-2002ನೇ ಸಾಲಿನಿಂದ ಜಾರಿಗೆ ಬರುವಂತೆ 40 ರಿಂದ 60ಕ್ಕೆ ಹೆಚ್ಚಿಸಲು ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1) ಫಾರ್ಮಕಾಗ್ನಸಿ ಮತ್ತು ಫಾರ್ಮಕಾಲಜಿ ವಿಷಯಗಳಲ್ಲಿ ಇಬ್ಬರು ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳಬೇಕು.

2) ಪ್ರಾಣಿಗಳ ಪ್ರಯೋಗಾಲಯಕ್ಕಾಗಿ ಕೇಂದ್ರ ಸರ್ಕಾರದಿಂದ ನೋಂದಾಯಿಸಲ್ಪಟ್ಟ ಪೂರ್ಣ ಪ್ರಮಾಣದ ಪ್ರಾಣಿಗಳ ಗೃಹವನ್ನು ಒದಗಿಸಿಕೊಳ್ಳತಕ್ಕದ್ದು.

3) ಹೆಚ್ಚು ಗ್ರಂಥಾಲಯ ಪುಸ್ತಕಗಳನ್ನು, ಕನಿಷ್ಠ 5 ಅಂತರಾಷ್ಟ್ರೀಯ ಜರ್ನಲ್‌ಗಳನ್ನು ಒದಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಶ್ರೀನಿವಾಸನ್) 24/5/
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲ

ಇವರಿಗೆ:

1) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-560 041.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು-560 009.
3) ಅಡ್ವೈಸರ್ (ಅಪ್ರೂವಲ್) ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್, ಇಂದಿರಾಗಾಂಧಿ ಸ ಕಾಂಪ್ಲೆಕ್ಸ್, ಐ.ಪಿ.ಎಸ್ಟೇಟ್, ನವದೆಹಲಿ-110 002.
4) ಪ್ರಾಂಶುಪಾಲರು, ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, ರಾಜಾಜಿನಗರ, ಬೆಂಗಳೂರು-560 010.
5) ಸಚಿವ ಸಂಪುಟ ಶಾಖೆ.
6) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

PRINCIPAL
KLE UNIVERSITY'S
COLLEGE OF PHARMACY
Rajajinagar, Bangalore-10